# ಕೃಷಿ ಸಖ್ಯ, ನ್ಯಾಯದ ಪಥ



**ಸಾರ್ವಜನಿಕ ಸೇವೆಯಲ್ಲಿ ಇರುವವರಿಗೆ ಅಂತಃಕರಣವೂ ಜೊತೆಯಾದರೆ ಸಮಾಜದ ಆರೋಗ್ಯ ಹೇಗೆ ಸುಧಾರಿಸಬಹುದು ಎನ್ನುವುದಕ್ಕೆ ಮೋಹನ್ ಅವರು ಒಳ್ಳೆಯ ಉದಾಹರಣೆ. ಸರ್ಕಾರಿ ನ್ಯಾಯದ ಪಥದಲ್ಲಿ ನಡೆಯುತ್ತಲೇ ಕೃಷಿಯಲ್ಲೂ, ಸಾಮಾಜಿಕ ಚಟುವಟಿಕೆಗಳಲ್ಲೂ ತೊಡಗಿಸಿಕೊಂಡಿರುವ ಸಾಧನೆ ಅವರದ್ದು.**

**■ ಸುಬ್ರಮಣ್ಯ ಎಚ್.ಎಂ.**

ಆದಿನ ಎಳೆ ಬಿಸಿಲು ಮರೆಯಾಗಿ ಉರಿ ಬಿಸಿಲು ಏರೋ ಹೊತ್ತು. ಟ್ರ್ಯಾಕ್ಟರ್‌ಗೆ ಹುಲ್ಲಿನ ಹೊರೆಯನ್ನು ಲಗುಬಗನೆ ತುಂಬುತ್ತಾ ಯಾವ ಆಯಾಸವೂ ಇಲ್ಲದೆ ಕೆಲಸದಲ್ಲಿ ಮಗ್ನರಾಗಿದ್ದರು ಆ ರೈತ. ಅಲ್ಲಿಂದ ನೇರವಾಗಿ ಕುರಿ ಶೆಡ್‌ಗೆ ಹೋಗಿ ಕುರಿ–ಮೇಕೆಗಳಿಗೆ ಹುಲ್ಲು–ನೀರು ಉಣಿಸಿ ನಂತರ ಗುದ್ದಲಿ ಹಿಡಿದು ಅಡಿಕೆ ತೋಟದತ್ತ ಹೊರಟರು.

ತೆಂಗು, ಅಡಿಕೆ ತೋಟದಲ್ಲಿ ಕಳೆ ಕೀಳುತ್ತಾ, ಪಾತಿ ಕಟ್ಟುವ ಕೆಲಸವನ್ನು ಕರಾರುವಕ್ಕಾಗಿ ಮಾಡಿ ಮುಗಿಸಿದರು. ಬಿಸಿಲೇರಲು ಶುರುವಾಗುತ್ತಿದ್ದಂತೆ ಆಳುಗಳನ್ನು ತಿಂಡಿ ತಿನ್ನಲು ಹೊರಡಿಸಿದರು. ಎಲ್ಲರಿಗೂ ಚಿತ್ರಾನ್ನ–ವಡೆ ಖುದ್ದು ಬಡಿಸುತ್ತಾ ಅವರ ಬೇಕು–ಬೇಡುಗಳನ್ನು ಕೇಳುತ್ತಿದ್ದರು. ಆಳಾಗಿ ದುಡಿದು ಅರಸನಾಗಿ ಉಣ್ಣುವ ಈ ಒಕ್ಕಲು ಮಗ ಎಚ್.ಎ. ಮೋಹನ್. ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್‌ನಲ್ಲಿ ಸಿಬಿಐ ಮತ್ತು ಜಾರಿ ನಿರ್ದೇಶನಾಲಯದ ನ್ಯಾಯಾಧೀಶ. ಕೆಲಸದ ದಿನಗಳಲ್ಲಿ ಘನತೆವೆತ್ತ ನ್ಯಾಯಾಧೀಶರು. ರಜೆ ದಿನ ಅವರೊಬ್ಬ ಸಾಮಾನ್ಯ ರೈತ. ಯಾವ ಹಮ್ಮುಬಿಮ್ಮು ಇಲ್ಲದ ಅಪ್ಪಟ ಸಾವಯವ ಕೃಷಿಕ.

ಮೋಹನ್, ತುಮಕೂರು ನಗರಕ್ಕೆ ಕೂಗಳತೆ ದೂರದಲ್ಲಿ ಇರೋ ಹಬ್ಬತ್ತನಹಳ್ಳಿಯವರು. ರೈತಾಪಿ ಕುಟುಂಬದ ಇವರು ತಮ್ಮ 12 ಎಕರೆ ಕೃಷಿ ಭೂಮಿಯಲ್ಲಿ ತೆಂಗು, ಅಡಿಕೆ, ಬಾಳೆ, ಅರಿಶಿಣ ಸಮಗ್ರ ಬೇಸಾಯ ಮಾಡಿದ್ದಾರೆ. ಇದರೊಂದಿಗೆ ಕುರಿ–ಸಾಕಾಣಿಕೆಯ ಉಪ ಕಸುಬು ಮಾಡ್ತಾರೆ.

ಇವರ ತಂದೆ ಅಡವಿಸ್ವಾಮಿ ಸ್ವಾತಂತ್ರ್ಯ ಚಳವಳಿಗೆ ಅರ್ಪಿಸಿಕೊಂಡ ದೇಶಾಭಿಮಾನಿ. ಮನೆಯಲ್ಲಿದ್ದ ಚಿನ್ನ, ಆಸ್ತಿಯನ್ನು ದೇಶ ಸೇವೆಗಾಗಿ ಮಾರಿದ ಕೊಡುಗೈ ದಾನಿ. 60ರ ದಶಕದಲ್ಲಿ ಬಿ.ಎಸ್ಸಿ. ಕೃಷಿ ಪದವಿ ಪಡೆದ ಅಡವಿಸ್ವಾಮಿ, ಒಂದು ವರ್ಷ ಕೊರಟಗೆರೆಯಲ್ಲಿ ಸರ್ಕಾರಿ ಕೃಷಿ ಅಧಿಕಾರಿಯಾಗಿ ಕೆಲಸ ಮಾಡಿದವರು. ಕೆಲಸ ಬಿಟ್ಟು ಬೇಸಾಯ, ಹೈನುಗಾರಿಕೆ, ಡೇರಿ ಸ್ಥಾಪನೆಯಂತಹ ಜನೋಪಕಾರಿ ಕೆಲಸಗಳಿಗೆ ಹೆಸರಾದವರು. ಕೆಂಗಲ್ ಹನುಮಂತಯ್ಯ, ದೇವರಾಜ ಅರಸು ಅವರಂತಹ ಧೀಮಂತ ರಾಜಕಾರಣಿಗಳ ಒಡನಾಟದಲ್ಲಿ ಇದ್ದವರು. ಆ ಕಾಲಕ್ಕೆ ಎಂಎಲ್‌ಎ ಟಿಕೆಟ್ ಸಿಕ್ಕರೂ ರಾಜಕೀಯ ಬದಿಗೊತ್ತಿ ಗ್ರಾಮ ಸ್ವರಾಜ್ಯದ ಕನಸು ಬಿತ್ತಿದವರು. ಅಪ್ಪಟ ಗಾಂಧಿವಾದಿ. ಮೋಹನ್ ಅವರ ತಾಯಿ ಅಶ್ವತ್ಥಮ್ಮ, 1962ರಲ್ಲಿ ಭಾರತ–ಚೀನಾ ನಡುವಿನ ಯುದ್ಧದ ಸಂದರ್ಭ ದೇಶದ ಸೈನ್ಯಕ್ಕೆ ಒಡವೆ ದಾನ ಮಾಡಿ ಸೈ ಎನಿಸಿಕೊಂಡ ಗ್ರಾಮೀಣ ಗೃಹಿಣಿ.



ನಿರ್ಮಾಣವಾದ ಚೆಕ್ ಡ್ಯಾಂ

ಇಂತಹ ಹಿನ್ನೆಲೆಯ ದೊಡ್ಡ ಕುಟುಂಬದಲ್ಲಿ ಬೆಳೆದ ಮೋಹನ್, ಓದು ಮತ್ತು ಕೃಷಿಯನ್ನು ಒಟ್ಟೊಟ್ಟಿಗೆ ಮಾಡುತ್ತಾ ಸಾಗಿದವರು. ತುಮಕೂರಿನಲ್ಲೇ ಕಾನೂನು ಪದವಿ ಮುಗಿಸಿದರು. ವಕೀಲಿಕೆ ಪಟ್ಟುಗಳನ್ನು ಕಲಿಯುತ್ತಾ 2000ರಲ್ಲಿ ನ್ಯಾಯಾಧೀಶರ ಪರೀಕ್ಷೆ ಪಡೆದು ನ್ಯಾಯಾಂಗ ಇಲಾಖೆ ಸೇರಿದರು. ಕೋಲಾರ, ಶಿವಮೊಗ್ಗ, ಮೈಸೂರಿನಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರಾಗಿ ಕೆಲಸ ಮಾಡಿದ್ದಾರೆ. ಈ ಕ್ಷೇತ್ರದಲ್ಲಿ ಅವರಿಗೆ 25 ವರ್ಷ ಸೇವಾನುಭವ ಇದೆ.

ರಜೆ ದಿನ ಊರಿನತ್ತ ಹೊರಟರೆ ಅವರು ಅಪ್ಪಟ ಕೃಷಿಕರಾಗಿ ಬದಲಾಗುತ್ತಾರೆ. ಹೆಗಲ ಮೇಲೊಂದು ಟವಲ್, ಟೀ ಶರ್ಟ್, ಚಡ್ಡಿ ಧರಿಸಿ ತೋಟದ ಯಾವುದೋ ಮೂಲೆಯಲ್ಲಿ ಏನಾದರೊಂದು ಕೃಷಿ